ಅಧ್ಯಕ್ಷರು :— ಅದು ನನ್ನ ಸೃಷ್ಟಿ ಅಲ್ಲ, ಫೈನಾನ್ಸ್ ಮಿನಿಸ್ಟರ್‌ರವರಿಂದ ಬಂದಿರುವುದು, ಅದನ್ನು ನಿಮಗೆ ಕಳುಹಿಸಿದ್ದೇವೆ ಅಷ್ಟೆ.

ಶ್ರೀ ಯು.ಆರ್. ಸಭಾಪತಿ :— ಫೈನಾನ್ಸ್ ಸೆಕ್ರೆಟರಿಯವರು ಅವರದೇ ಆದ ನಿಲುವನ್ನು ತಾಳಿರುತ್ತಾರೆ. ನಮ್ಮ ನಿಲುವು ಏನಿದೆ ಅದನ್ನು ಅವರಿಗೆ ಹೇಳಬೇಕೇ ವಿನಃ ಅವರ ನಿಲುವನ್ನು ನಾವು ಕೇಳುವುದು ಅಲ್ಲ.

ಅಧ್ಯಕ್ಷರು :— ಹಣಕಾಸು ಸಚಿವರ ಹತ್ತಿರ ಮಾತನಾಡಿ ತಮಗೆ ಅನುಕೂಲವಾಗುವ ಹಾಗೆ ಮಾಡಿಕೊಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುದಮನಹಳ್ಳಿ :— ಪ್ರತಿ ಎರಡು ತಿಂಗಳಿಗೆ ಒಂದು ಸಾರಿ ಅದರಲ್ಲಿ ಹೊಸ ಹೊಸ ವಿಧಾನಗಳು ಬರುತ್ತಿವೆ. ನಾಲ್ಕು ವರ್ಷಗಳಲ್ಲಿ ಅದನ್ನು ವಾಪಸ್ ಕೊಡಬೇಕೆಂದು ಕಂಡಿಷನ್ ಹಾಕಿದರೆ ನಮಗೆ ಏಕೆ ಕೊಡಬೇಕು? ನಾವು ಏನು ಹೇಳುತ್ತೇವೋ ಅದನ್ನು ಕೊಂಡು ನಮಗೆ ಕೊಡಿ, ಹಣ ಬೇಡ,

(iv) ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಬಿಜಾಪುರ ತಾಲ್ಲೂಕು ಚಿಕ್ಕಗಲಗಲಿ ಗ್ರಾಮ ಮುಳುಗಡೆಹೊಂದಿರುವ ವಿಚಾರ.

ಶ್ರೀ ಸಂಗಣ್ಣ ಕೆ. ಬೆಳ್ಳುಬ್ಬಿ (ಬಸವನ ಬಾಗೇವಾಡಿ) :— ಮಾನ್ಯ ಅಧ್ಯಕ್ಷರೆ, ಬಿಜಾಪುರ ತಾಲ್ಲೂಕು ಚಿಕ್ಕಗಲಗಲಿ ಗ್ರಾಮ ಈ ವರ್ಷ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ 515.9 ಆಡಿ ನೀರು ಬಂದಾಗ ಆ ಗ್ರಾಮದ ಹತ್ತಿರ ನೀರು ಬಂದು ಆ ಗ್ರಾಮದ ಕೆಲವು ಭಾಗಗಳು ಮುಳಗಡೆಯಾಗಿದ್ದು, ಆ ಗ್ರಾಮದ ಜನತೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಮಾನ್ಯ ಭಾರೀ ನೀರಾವರಿ ಮಂತ್ರಿಗಳು ಚಿಕ್ಕ ಗಲಗಲಿ ಗ್ರಾಮದ ಎಲ್ಲ ಮನೆಗಳನ್ನು ಸ್ವಾಧೀನಪಡಿಸಿಕೊಂಡು ಎಲ್ಲ ಗ್ರಾಮಗಳಂತೆ ಆ ಗ್ರಾಮಕ್ಕೂ ಬೇಗನೆ ಪರಿಹಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(v) ಮೈಸೂರಿನ ಅಶೋಕಪುರಂ ಮೊಹಲ್ಲಾದಲ್ಲಿ ಅಕ್ರಮವಾಗಿ ಹೆಂಡ ಮಾಡುತ್ತಿರುವುದು.

ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಎಸ್‌ಟಿ ವರ್ಗದ ಜನರು 25 ಸಾವಿರಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿರುವ ಬಡಾವಣೆ ಎಂದರೆ ಅದು ಮೈಸೂರಿನ ಅಶೋಕಪುರಂ ಮೊಹಲ್ಲಾ ಈ ಪ್ರದೇಶದಲ್ಲಿ ಕಳೆದ ಒಂದು ವರ್ಷದಿಂದ ಅಕ್ರಮ ರೀತಿಯಲ್ಲಿ ಹೆಂಡವನ್ನು ಮಾರುವಂಥ ವ್ಯವಸ್ಥೆ ನಡೆಯುತ್ತಿರುವುದು ಎಲ್ಲಾ ಕಡೆಗಳಲ್ಲಿ ವರದಿಯಾಗಿದೆ. ಆ ಕುರಿತು ಸರಕಾರಕ್ಕೆ ದೂರುಗಳು ಬಂದರೂ ಕೂಡ ಸರಕಾರದವರು ಯಾವ ಕ್ರಮಗಳನ್ನೂ ತೆಗೆದುಕೊಂಡಿಲ್ಲ. ಒಂದು ವರ್ಷದಿಂದ ಜನರು

ಈ ಹೆಂಡ ಮಾರಾಟದಿಂದಾಗಿ ಬಹಳ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈಗ ಮೊದಲಿನ ಹಾಗೆ ಪೌಚಸ್‌ಗಳಿಲ್ಲ. ಆದರೆ ಪ್ರತಿಯೊಂದು ಮನೆಗಳಲ್ಲಿ ರಸ್ತೆಗಳಲ್ಲಿ ಯಾರು ಕಾಂಟ್ರಾಕ್ಟ್ ತೆಗೆದುಕೊಂಡಿದ್ದಾರೋ ಅವರು ಒಂದು ಕ್ರಿಸ್ಟಲ್‌ನ್ನು ತೆಗೆದುಕೊಂಡು ಬಂದು ಮನೆಯಲ್ಲಿರುವ ದೊಡ್ಡ ದೊಡ್ಡ ಪಂಡೆಯೊಳಗೆ ಕೆಮಿಕಲ್ಸ್ ಜೊತೆಗೆ ಹಾಕಿಟ್ಟುಕೊಂಡು ಮಾರುವ ವ್ಯವಸ್ಥೆಯನ್ನು ಮಾಡಿದರು. ಅದರ ಹೆಸರು ಮಾಯಾ ಹೆಂಡ ಎಂದು. ಒಂದು ಬಾಟಲ್‌ಗೆ ಐದು ರೂಪಾಯಿಗಳು. ಅದನ್ನು ಮಾರುವ ವ್ಯವಸ್ಥೆಯು ಆ ಪ್ರದೇಶದಲ್ಲಿ ಆಯಿತು. ಇದರ ಪರಿಣಾಮವಾಗಿ ಕುಡಿದ ಸುಮಾರು ೪೦ ಜನರಿಗೆ ನರದ ರೋಗವು ಕಾಣಿಸಿಕೊಂಡಿತು. ೨೫-೨೬ ಜನರು ತಮ್ಮ ದೃಷ್ಟಿಯನ್ನು ಕಳೆದುಕೊಂಡಿದ್ದಾರೆ. ಜ್ಯಾಂಟ್ ಪೈನ್ ಬಂದು ಆಸ್ಪತ್ರೆಗಳಲ್ಲಿ ಬಹಳ ಜನರು ಸೇರಿಕೊಂಡರು. ಅದರ ಜೊತೆಗೆ ಸುಮಾರು ೬೦ ಜನರು ಈ ಹೆಂಡವನ್ನು ಕುಡಿದು ಸತ್ತಿದ್ದಾರೆ ಎಂಬ ದಾಖಲೆಗಳನ್ನು ಆರೋಗ್ಯ ಇಲಾಖೆಗೆ ಕೊಟ್ಟ ನಂತರ ಅಬಕಾರಿ ಮತ್ತು ಪೋಲೀಸ್ ಇಲಾಖೆಯವರು ಕ್ರಮ ತೆಗೆದುಕೊಂಡಿಲ್ಲವೆಂದು ಅಲ್ಲಿಯ ಜನರೇ ರೊಚ್ಚಿಗೆದ್ದು ಸುಮಾರು ಹತ್ತು ಸಾವಿರ ಜನರ ಒಂದು ಮೊಡ್ಡ ರ್ಯಾಲಿಯನ್ನು ಮಾಡಿ ಮಹಿಳೆಯರು ಸೇರಿ ಪ್ರೊಟೆಸ್ಟ್ ಮಾಡಿದರು. ಅನಂತರ ಒಂದು ವಾರದ ಕಾಲ ಆ ಹೆಂಡವನ್ನು ಮಾರುವ ವ್ಯವಸ್ಥೆಯನ್ನು ಪೋಲೀಸರು ನಿಲ್ಲಿಸಿದರು. ಆದರೆ ಇವೊತ್ತು ಯಾರು ಹೆಂಡವನ್ನು ಮನೆಗಳಲ್ಲಿ ಮಾರುವ ಬದಲು ಪೌಚ್‌ಗಳಲ್ಲಿ ಯಾವ ಕೆಮಿಕಲ್ಸ್‌ನ್ನು ಕ್ರಿಸ್ಟಲ್ ರೂಪದಲ್ಲಿ ಉಪಯೋಗಿಸುತ್ತಿದ್ದರು ಅದನ್ನು ಎಲ್ಲ ಕಡೆಗಳಲ್ಲಿಯೂ ಕೂಡ ಮಾರಾಟ ಮಾಡುವಂಥ ವ್ಯವಸ್ಥೆಯಾಗುತ್ತಿದೆ. ಎಲ್ಲರೂ ಕೂಡ ಕ್ರಿಸ್ಟಲ್‌ನ್ನು ಜೇಬಿನಲ್ಲಿಯೂ ಇಟ್ಟುಕೊಂಡು ಹೋಗಬಹುದು. ಅದಕ್ಕೆ ಸೋಡ ಅಥವಾ ನೀರನ್ನು ಮಿಕ್ಸ್ ಮಾಡಿ ಎಲ್ಲಿ ಬೇಕಾದರೂ ಕುಡಿಯಬಹುದು. ಈಗ ಅದನ್ನು ದೊಡ್ಡ ಡ್ರಮ್‌ಗಳಲ್ಲಿಟ್ಟು ಮಾರಾಟ ಮಾಡುವ ಪದ್ಧತಿ ತಪ್ಪಿಹೋಗಿ ಪೌಚ್‌ಗಳಲ್ಲಿ, ಕ್ರಿಸ್ಟಲ್‌ಗಳಲ್ಲಿ ಮಾರುವಂಥ ವ್ಯವಸ್ಥೆ ಆಗುತ್ತಿದೆ. ಒಂದು ಕ್ರಿಸ್ಟಲ್‌ಗೆ ಹತ್ತು ರೂಪಾಯಿಗಳಂತೆ ಮಾರಾಟ ಮಾಡುತ್ತಿರುವುದು ಅಬಕಾರಿ ಇಲಾಖೆಯವರಿಗೆ ಗೊತ್ತಿದ್ದರೂ ಕೂಡ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಆದ್ದರಿಂದ ದಯಮಾಡಿ ಇದಕ್ಕೆ ಸಂಬಂಧಪಟ್ಟವರು ಯಾರಿದ್ದಾರೋ ಅವರನ್ನು ತತ್‌ಕ್ಷಣ ಬಂಧಿಸಬೇಕು, ಯಾರು ಹೆಂಡವನ್ನು ಮಾಡುವ ಕಾಂಟ್ರಾಕ್ಟ್ ಮಾಡುತ್ತಿದ್ದಾರೆ ಅವರ ಮೇಲೆ ಕಠಿಣ ಕ್ರಮವನ್ನು ಕೈಗೊಳ್ಳಬೇಕು. ಹಾಗೂ ಆ ಕೆಮಿಕಲ್ಸ್ ಎಲ್ಲಿಂದ ಬರುತ್ತದೆ ಎಂಬುದನ್ನು ಪತ್ತೆ ಹಚ್ಚಬೇಕು. ಜಿಲ್ಲಾಧಿಕಾರಿಗಳು ತನಿಖೆ ಮಾಡುತ್ತೇವೆಂದು ಹೇಳಿದರೂ ಕೂಡ ಇವೊತ್ತಿನವರೆಗೆ ವರದಿಯನ್ನು ಕೊಟ್ಟಿಲ್ಲ. ೬೯ ಜನರು ಯಾರೂ ಇದರಿಂದಾಗಿ ಸತ್ತಿದ್ದಾರೆ ಅವರಿಗೆ ಪರಿಹಾರವನ್ನು ಕೊಡುವವರು ಯಾರು? ಆದ್ದರಿಂದ ಇಂಥ ಒಂದು ಗಂಭೀರ ವಿಚಾರದ ಬಗ್ಗೆ ಸಮಗ್ರವಾದ ತನಿಖೆಯಾಗಬೇಕು, ಸಂಬಂಧಪಟ್ಟ ಅಪಾದಿತರಿಗೆ ಶಿಕ್ಷೆಯಾಗಬೇಕು, ೬೯ ಜನರು ಯಾರು ಸತ್ತಿದ್ದಾರೆ ಅವರ ಕುಟುಂಬಗಳಿಗೆ ಪರಿಹಾರವನ್ನು ಕೊಡಬೇಕೆಂದು ವಿಚಾರವನ್ನು ನಾನು ಸರಕಾರದವರಲ್ಲಿ ಕೇಳಲು ಇಚ್ಛಿಪಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುದವನಹಳ್ಳಿ :— ಮಾನ್ಯ ಅಧ್ಯಕ್ಷರೇ, ಮಾಯಾ ಬಜಾರ್ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದರಲ್ಲ? ಈ ಮಾಯಾ ಹೆಂಡಕ್ಕೂ ಅದಕ್ಕೂ ಸಂಬಧವಿದೆಯೇ? ಹೇಳುವಿರಾ?

ಶ್ರೀ ಹಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡರು ಈ ಕಡೆ ಇದ್ದಾಗ ಸೆಕೆಂಡ್ಸ್ ಬಗ್ಗೆ ಭಾರಿ ವ್ಯಾಖ್ಯಾನ ಮಾಡುತ್ತಾ ಇದ್ದರು. ಆ ಕಡೆಗೆ ಹೋದಮೇಲೆ ಆ ವಿಚಾರವನ್ನು ಬಿಟ್ಟುಬಿಟ್ಟಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ (ಮಾನ್ಯ ಪ್ರವಾಸ್ಯೋದ್ಯಮ ಮತ್ತು ವಕ್ಫ್ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರವನ್ನು ಸಂಬಂಧಪಟ್ಟ ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ಜರುಗಿಸಲು ಕೇಳಿಕೊಳ್ಳುತ್ತೇನೆ.

ಶ್ರೀ ಎ. ರಾಮದಾಸ್ :— ಇದು ತುಂಬ ಗಂಭೀರವಾದ ವಿಚಾರ. ಅಲ್ಲಿ ೬೯ ಜನರು ಸತ್ತಿದ್ದಾರೆ. ಆ ಸಮಸ್ಯೆಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ, ಸಂಬಂಧಪಟ್ಟವರಿಗೆ ದೂರು ಕೊಡಲಾಗಿದೆ. ಇದರ ಬಗ್ಗೆ ಒಂದು ತನಿಖೆಯನ್ನು ನಡೆಸಿ ಕ್ರಮ ಜರುಗಿಸಬೇಕು. ಅಲ್ಲಿ ಸತ್ತವರೆಲ್ಲ ಪರಿಶಿಷ್ಟ ವರ್ಗದವರು. ಆ ಬಗ್ಗೆ ಗಮನಕೊಡಬೇಕು.

ಶ್ರೀ ಹಾಗೋಡು ತಿಮ್ಮಪ್ಪ (ಮಾನ್ಯ ಸಮಾಜಕಲ್ಯಾಣ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೂಡ ಈ ವಿಚಾರದಲ್ಲಿ ಸಹಾಯ ಮಾಡಬೇಕು. ನಾನು ನಮ್ಮ ಇಲಾಖಾ ಅಧಿಕಾರಿಗಳನ್ನು ಕಳುಹಿಸಿಕೊಡುತ್ತೇನೆ. ಅಲ್ಲಿ ಒಂದು ಆಫೇರ್‌ನೆಸ್ ಕ್ಯಾಂಪೇಸ್ ಮಾಡೋಣ. ತಾವುಗಳು ಆಸಕ್ತಿ ಮಹಿಸಿದರೆ ನಾನು ಕೂಡ ಬರುತ್ತೇನೆ. ನಮ್ಮ ಅಧಿಕಾರಿಗಳು ನಿಮ್ಮನ್ನು ಕಾಂಟಾಕ್ಟ್ ಮಾಡುತ್ತಾರೆ, ನೀವು ಸಹಕಾರ ಕೊಡಿ. ಆಗಿರುವ ಘಟನೆ ಬಗ್ಗೆ ತನಿಖೆ ಮಾಡಿಸೋಣ.

(vi) ಮುಂಡರಗಿ ತಾಲ್ಲೂಕು ಹಮಗಿ ಗ್ರಾಮದಲ್ಲಿ ಕುಡುಕರ ಕಾಟ

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೇ, ಹೋದ ವಾರದಲ್ಲಿ ಈ ವಿಚಾರದ ಬಗ್ಗೆ ಸ್ವಲ್ಪ ಮಟ್ಟಿನ ಚರ್ಚೆಯಾಗಿದೆ. ನಮ್ಮ ಮುಂಡರಗಿ ತಾಲ್ಲೂಕು ಹಮಗಿ ಗ್ರಾಮದಲ್ಲಿ ಕುಡುಕರ ಕಾಟ ತಾಳಲಾರದಾಗಿದೆ. ಗದಗ ತಾಲ್ಲೂಕಿನ ಈ ಊರಿನ ಎಲ್ಲಾ ಹೆಣ್ಣುಮಕ್ಕಳು ಒಂದಾಗಿ ಕುಡುಕ ಗಂಡರ ಕಾಟ ತಾಳಲಾರದೆ ಒಂದು ಕ್ರಮವನ್ನು ಕೈಗೊಂಡರು. ಭಾಗ್ಯಲಕ್ಷ್ಮಿ ಮಹಿಳಾ ಮಂಡಳ ಹಾಗೂ ಮಹಿಳಾ ಸಮುದಾಯ ಗುಂಪುಗಳು ಮತ್ತು ಮದ್ಯಪಾನ ನಿರ್ಮೂಲನಾ ಸಮಿತಿ - ಇವರುಗಳೆಲ್ಲರೂ ಸೇರಿಕೊಂಡು ಈ ಊರಿನ ಎಲ್ಲ ಮದ್ಯಪಾನದ ಅಂಗಡಿಗಳನ್ನು ಮುಚ್ಚಿಸಬೇಕು, ಊರಿನಲ್ಲಿ ಯಾರೂ ಕುಡಿಯಬಾರದು ಎಂದು ಒಂದು ತೀರ್ಮಾನವನ್ನು ಮಾಡಿದರು.